ಕಣ್ಣಿಗೆ ಬೀಳುತ್ತದೆ. ಇತಿಹಾಸ, ಪ್ರಕೃತಿ ಮತ್ತು ಆಧ್ಯಾತ್ಮಿಕತೆಯ ಅಪರೂಪದ ಸಂಗಮವಾಗಿರುವ ಈ ದೃಶ್ಯ, ಕಾಂಗ್ರಾ ಕೋಟೆಯನ್ನು ಕೇವಲ ಒಂದು ಸೈನಿಕ ಸ್ಮಾರಕವಲ್ಲ, ಭಾರತದ ಸಾಂಸ್ಕೃತಿಕ ಆತ್ಮದ ಪ್ರತೀಕವಾಗಿಯೂ ರೂಪಿಸುತ್ತದೆ.

## ಇತಿಹಾಸದ ಪಯಣ

ಕಾಂಗ್ರಾ ಕೋಟೆಯ ನಿರ್ಮಾಣ ಕ್ರಿ.ಪೂ. 11 ರಿಂದ 9ನೇ ಶತಮಾನಗಳ ಅವಧಿಯಲ್ಲಿ ಆರಂಭವಾಗಿರಬಹುದೆಂದು ಇತಿಹಾಸಕಾರರು ಅಂದಾಜು ಮಾಡಿದ್ದಾರೆ. ಈ ಪ್ರದೇಶದ ಪ್ರಾಚೀನ ಇತಿಹಾಸಕ್ಕೆ ಮಹತ್ವದ ಆಧಾರವಾಗಿರುವ ಮಹಾಭಾರತದಲ್ಲಿಯೇ ತ್ರಿಗರ್ತ ರಾಜ್ಯದ ಉಲ್ಲೇಖ ಕಂಡುಬರುತ್ತದೆ. ತ್ರಿಗರ್ತರು ಕಾಂಗ್ರಾ ಪ್ರದೇಶವನ್ನು ಆಳಿದ ಶಕ್ತಿಶಾಲಿ ಹಾಗೂ ಪ್ರಾಚೀನ ರಾಜವಂಶವಾಗಿದ್ದು, ಇಂದಿನ ಕಾಂಗ್ರಾ ಕೋಟೆ ಅವರ ಆಡಳಿತ ಕಾಲದಲ್ಲೇ ನಿರ್ಮಾಣವಾಗಿ ಕ್ರಮೇಣ ವಿಸ್ತಾರವಾಯಿತೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ.

ಕಾಲಕ್ರಮೇಣ ತ್ರಿಗರ್ತ ರಾಜವಂಶವು ಕುಟ್ಲೇಹರ್ ಕಾಟೋಚ್ ವಂಶವಾಗಿ ಪರಿಚಿತವಾಯಿತು. ಈ ವಂಶವು ಭಾರತದಲ್ಲೇ ನಿರಂತರವಾಗಿ ಉಳಿದುಕೊಂಡಿರುವ ಅತಿ ಹಳೆಯ ರಾಜವಂಶಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಶತಮಾನಗಳಿಂದ ಅನೇಕ ರಾಜಕೀಯ ಬದಲಾವಣೆಗಳು, ಯುದ್ಧಗಳು ಮತ್ತು ಆಕ್ರಮಣಗಳನ್ನು ಎದುರಿಸಿದರೂ, ಕಾಂಗ್ರಾ ಕೋಟೆ ಈ ವಂಶದ ಶೌರ್ಯ, ಸ್ಥೈರ್ಯ ಮತ್ತು ಐತಿಹಾಸಿಕ ಪರಂಪರೆಯ ಮೌನ ಸಾಕ್ಷಿಯಾಗಿ ಇಂದಿಗೂ ದೃಢವಾಗಿ ನಿಂತಿದೆ.

## ಆಳಿದ ರಾಜವಂಶಗಳು

ಕಾಂಗ್ರಾ ಕೋಟೆಯ ಇತಿಹಾಸವು ಕಾಟೋಚ ರಾಜವಂಶದ (Katoch Dynasty) ಉಲ್ಲೇಖವಿಲ್ಲದೆ ಅಪೂರ್ಣವೆನ್ನಬಹುದು. ಈ ವಂಶಕ್ಕೆ ಸೇರಿದ ರಾಜ ಧರ್ಮಚಂದ್ರ ಮತ್ತು ನಂತರದ ಅತ್ಯಂತ ಪ್ರಭಾವಿ ಆಡಳಿತಗಾರರಾದ



ದರ್ಶನಿ ದರ್ವಾಜಾ–ಗಂಗಾ ಯಮುನಾ ದ್ವಾರ



ಜೈನ ದೇವಾಲಯದ ಭಿತ್ತಿಯಲ್ಲಿರುವ ಶಿಲ್ಪಗಳು

ರಾಜಾ ಸಂಸಾರ ಚಂದ್ರ (1765–1823) ಕಾಂಗ್ರಾದ ವೈಭವವನ್ನು ಶಿಖರಕ್ಕೆ ಕೊಂಡೊಯ್ದರು. ಸಂಸಾರ ಚಂದ್ರನ ಆಡಳಿತ ಕಾಲದಲ್ಲಿ ಕಲೆ, ಸಂಸ್ಕೃತಿ, ರಾಜಕೀಯ ಕ್ಷೇತ್ರಗಳಲ್ಲಿ ಕಾಂಗ್ರಾ ಉತ್ತುಂಗವನ್ನು ತಲುಪಿತು. ಇದೇ ಅವಧಿಯಲ್ಲಿ ಕಾಂಗ್ರಾ ಮಿನಿಯೇಚರ್ ಪೇಂಟಿಂಗ್‌ಗಳು ವಿಶ್ವಮಟ್ಟದಲ್ಲಿ



ಅಂಬಿಕಾ ದೇವಿ

ಖ್ಯಾತಿ ಗಳಿಸಿದವು. ರಾಜಾಶ್ರಯದಿಂದ ಬೆಳೆದ ಈ ಚಿತ್ರಕಲೆಯನ್ನು ಭಾರತೀಯ ಕಲಾ ಪರಂಪರೆಯ ಅಮೂಲ್ಯ ಅಧ್ಯಾಯವಾಗಿ ಗುರುತಿಸಲಾಗಿದೆ.

ಮುಘಲ್ ಬಾದಶಾಹ ಜಹಾಂಗೀರ್ ಕಾಂಗ್ರಾ ಕೋಟೆಯ ವೈಭವ ಹಾಗೂ ಹಿಮಾಲಯದ ನೈಸರ್ಗಿಕ ಸೌಂದರ್ಯಕ್ಕೆ ಮೋಹಿತರಾಗಿ, ಕೆಲವು ಕಾಲ ಕೋಟೆಯಲ್ಲೇ ವಾಸಿಸಿದ್ದನೆಂಬ ಐತಿಹಾಸಿಕ ದಾಖಲೆಯಿದೆ. ಈ ಅವಧಿಯಲ್ಲಿ ಕೋಟೆಯ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಲಾಯಿತಾದರೂ, ಕಾಟೋಚ ವಂಶದ ರಾಜಕೀಯ ಸ್ವಾಯತ್ತತೆ ಕ್ರಮೇಣ ಕುಗ್ಗಿತು.

1810ರಲ್ಲಿ ಮಹಾರಾಜ ರಣಜಿತ್ ಸಿಂಗ್ ಮುಘಲರಿಂದ ಕಾಂಗ್ರಾ ಕೋಟೆಯನ್ನು ವಶಪಡಿಸಿಕೊಂಡರು. ಇದರೊಂದಿಗೆ ಹಿಮಾಲಯದ ಪಾದಭಾಗಗಳಲ್ಲಿ ಪಂಜಾಬ್ ಸಿಖ್ ಸಾಮ್ರಾಜ್ಯದ ಪ್ರಭುತ್ವ ಸ್ಥಾಪಿತವಾಯಿತು. ಸಿಖ್ ಆಳ್ವಿಕೆಯಲ್ಲಿ ಈ ಕೋಟೆ ಸುಮಾರು 36 ವರ್ಷಗಳ ಕಾಲ ಉಳಿಯಿತು. 1846ರ ಪ್ರಥಮ ಆಂಗ್ಲ–ಸಿಖ್ ಯುದ್ಧದ ನಂತರ ನಡೆದ ಒಪ್ಪಂದದಂತೆ ಕಾಂಗ್ರಾ ಕೋಟೆ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ಬ್ರಿಟಿಷರು ಇಲ್ಲಿ ಸಣ್ಣ ಸೇನಾ ತಾಣವನ್ನು ಸ್ಥಾಪಿಸಿ, ಕೋಟೆಯನ್ನು ತಮ್ಮ ಆಡಳಿತಾತ್ಮಕ ಉದ್ದೇಶಗಳಿಗೆ ಬಳಸಿಕೊಂಡರು. ಈ ಅವಧಿಯೊಂದಿಗೆ ಕಾಂಗ್ರಾ ಕೋಟೆಯ ದೀರ್ಘ ಸ್ವತಂತ್ರ ರಾಜವಂಶೀಯ ಇತಿಹಾಸವು ಅಂತ್ಯ ಕಂಡಿತು.

## ವೈಶಿಷ್ಟ್ಯ ಮತ್ತು ಶಿಲ್ಪಕಲೆ

ಕಾಂಗ್ರಾ ಕೋಟೆ ಕೇವಲ ಒಂದು ಯುದ್ಧಕೋಟೆಯಲ್ಲ; ಅದು ಶಿಲ್ಪಕಲೆ, ಧಾರ್ಮಿಕ ಪರಂಪರೆ ಮತ್ತು ಸುಧಾರಿತ ರಕ್ಷಣಾ ತಂತ್ರಜ್ಞಾನಗಳ ಅನನ್ಯ ಸಂಗಮ. ಪ್ರಕೃತಿಯನ್ನೇ ತನ್ನ ರಕ್ಷಣೆಯಾಗಿ ಬಳಸಿಕೊಂಡು ನಿರ್ಮಿಸಲಾದ

ಲಕ್ಷ್ಮೀನಾರಾಯಣ ದೇವಾಲಯದ ಅಲಂಕೃತ ಗೋಡೆಯ ಅವಶೇಷ

